೧೬) ಬೀದರ್ ಜಿಲ್ಲೆಯಲ್ಲಿ ರಾಜ್ಯ ರಸ್ತೆಗಳನ್ನು ರಿಪೇರಿ ಮಾಡಲು ಒತ್ತಾಯ

SRI M. D. LAIQUDDIN.— Sir, State High ways as well as roads of Bidar District are in a very bad shape and majority of them have become un-motorable. Because of the total neglect of Government and Zilla Parishat in this regard the travels and transport have become a risky affair. In Bidar taluk particularly in my constituency bus service to several villages like Rekulgi, Bailore, Shahapur, Yedlapur, Aurad (Sirsi), Telgan-mirzapur, Bebernalli, Jamped, Sikandrapur, Kaplapur (A), Goonalli, Chawdi, Honnekeri and Choundi etc. is totally paralysed. Several representations from public and elected representatives are not heeded to though the problem of road repairs and construction of roads was brought before this house since the last three years. But all such demands and representions have remained unfulfilled. I, therefore, urge upon the Government to construct new roads which are pending since several years and also to repair all roads connecting the District Headquarters by fixing time limit.

ಶ್ರೀ ಸಿದ್ಧರಾಮಯ್ಯ.— ಮಾನ್ಯ ಸದಸ್ಯರಿಗೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ, ನಿನ್ನ ಇದ್ದ ಪಿಪಿಳಿನೇ ನಿಯಮದ ಪ್ರಶ್ನೆಗಳನ್ನು ತಾವು ಇವತ್ತು ತೆಗೆದುಕೊಳ್ಳಲಿಲ್ಲ. ನಿನ್ನೆ ಗಲಾಟೆಯ ಮಧ್ಯೆ ಹಾಗೇ ಉಳಿದಂಹೋಯಿತು.

ಅಧ್ಯಕ್ಷರು.— ಯಾವುದಾದರೂ ಇದ್ದರೆ ನಾಳೆ ಹಾಕುತ್ತೇನೆ.

ಶ್ರೀ ಆರ್ ವೆಂಕಟರಾಮಯ್ಯ.— ನಿನ್ನೆಯಿಂದ ಸುಮಾರು ಹತ್ತು ಸಾವಿರ ಜನ ಗುತ್ತಿಗೆ ಶಿಕ್ಷಕರು ಸತ್ಯಾಗ್ರಹ ಮಾಡುತ್ತಿದ್ದಾರೆ. ಅದಕ್ಕೋಸ್ಕರ ನಾನು ತಮ್ಮ ಮೂಲಕ ವಿದ್ಯಾಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಬಿ. ಎಸ್ ಯಡಿಯೂರಪ್ಪ.— ನಿನ್ನೆ ೪–೫ ಸಾವಿರ ಜನ ಗುತ್ತಿಗೆ ಶಿಕ್ಷಕರು ಬಂದಿದ್ದರು. ನಾನು ಕೂಡ ಈ ಬಗ್ಗೆಯೇ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಎಂ. ಚಂದ್ರಶೇಖರ್ — ನಿನ್ನೆ ನಾನು ಈ ಎಲ್ಲ ಗಲಾಟೆ ಮುಗಿವ ಮೇಲೆ ಅವರ ನಾಯಕರನ್ನು ಭೇಟಿ ಮಾಡಿದ್ದೆ. ಇವತ್ತು ಬಿರಿಂದ ಳಿರವರೆಗೆ ಟೈಂ ಕೊಟ್ಟಿದ್ದೇನೆ. ಅವರೊಡನೆ ದೀರ್ಘವಾಗಿ ಚರ್ಚೆ ಮಾಡಿ ಸಮಸ್ಯೆಯನ್ನು ಇತ್ಯರ್ಥ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಪ್ರತಿಸಾರಿ ಈ ಮನೆಯಲ್ಲಿ ಈ ವಿಚಾರ ಬರುತ್ತಲೇ ಇದೆ. ಪ್ರತಿಯೊಂದು ಸಾರಿಯೂ ಭರವಸೆ ಕೊಡುತ್ತಿದ್ದೀರಿ. ಆದರೆ ಒಂದೂ ಕಾರ್ಯಗತವಾಗುತ್ತಿಲ್ಲ. ಕೊಟ್ಟ ಭರವಸೆ ಕಡೆ ಗಮನ ಕೊಡುತ್ತಿಲ್ಲ. ನೀವೇನೋ ಇವತ್ತು ಭೇಟಿ ಮಾಡುವುದಕ್ಕೆ ಒಪ್ಪಿಕೊಂಡಿದ್ದೀರಿ. ಅನೇಕ ಹೆಣ್ಣುಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆಂದು ಪತ್ರ ಬರೆದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರ ಜೊತೆ ಮಾತುಕತೆಯಾದಮೇಲೆ ಇಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ಆಯಿತು, ಹಾಗೆ ಮಾಡಲಿ. ಈಗ ಗೈರು ಹಾಜರಿದ್ದವರನ್ನು ಮತ್ತೆ ಕರೆಯುತ್ತೇನೆ.

ಶ್ರೀ ಬಿ.ಎ. ಉಮ್ಮರಬ್ಬ.—ಗುತ್ತಿಗೆ ಶಿಕ್ಷಕರ ಬಗ್ಗೆ ನನ್ನ ಪ್ರಶ್ನೆಗೆ ಲಿಖಿತ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ.

(ಆದೇ ಸಂದರ್ಭದಲ್ಲಿ ನೀಲಕಂಠಪ್ಪನವರು ಮತ್ತು ವೆಂಕಟರಾಮಯ್ಯನವರು ಜೊತೆಯಲ್ಲೇ ಮಾತನಾಡುತ್ತಿದ್ದರು.)

ಅಧ್ಯಕ್ಷರು.—ನೀವು ಮೂರು ಮಂದಿ ಮಾತನಾಡಿದರೆ ಯಾರ ಮಾತು ನಾನು ಕೇಳಬೇಕು ?

ಶ್ರೀ ಬಿ.ಎ. ಉಮರಬ್ಬ.—ಆ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದರೆ ಅದು ಸರಿಯಿಲ್ಲ. ಪ್ರತಿ ಸಾರಿ ಅಸೆಂಬ್ಲಿ ನಡೆದಾಗಲೂ ವಿಧಾನಸೌಧದ ಮುಂದೆ ರಸ್ತೆ ಮೇಲೆ ಬಂದು ಅವರು ಕುಳಿತುಕೊಳ್ಳುವ ಪರಿಸ್ಥಿತಿ ಇದೆ. ಹಾಗಾದರೆ ಈ ಸರ್ಕಾರಕ್ಕೆ ಶಿಕ್ಷಕರ ಅವಶ್ಯಕತೆ ಇಲ್ಲವೇ ? ಮಂತ್ರಿಗಳು ಅವರ ಜೊತೆ ಮಾತನಾಡುತ್ತೇನೆ ಎಂದು ಹೇಳುತ್ತಾರೆ. ಅವರು ಮಾತನಾಡಿದರೆ ಏನಾಗುತ್ತದೆ?

ಅಧ್ಯಕ್ಷರು.—ನೀಲಕಂಠಪ್ಪನವರೇ, ತಾವು ತಮ್ಮ ನೋಟೀಸ್ ಓದ್ರಿ.

ಶ್ರೀ ಬಿ.ಎ ಉಮರಬ್ಬ:—ಮೂರು ಗಂಟೆಯಿಂದ ೪ ಗಂಟೆವರೆಗೆ ಅವರಿಗೆ ಮಾತನಾಡಲು. ಟೈಮ್ ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ಅವರು ಏನು ಮಾತನಾಡುವುದು ? You know what are their problems. You know what they want.

SRI M CHANDRASHEKAR.—I don't know anything. They will come and represent.

MR. SPEAKER.—Nothing will go on record.

(ಗೊಂದಲ)

ಅಧ್ಯಕ್ಷರು.—ನೀವು ಹೀಗೆ ಯದ್ವಾತದ್ವಾ ಮಾತನಾಡಿದರೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮಂತ್ರಿಗಳು ಹೇಳಿದ್ದಾರೆ. ತಾವು ಕೂಡ್ರಿ. ನಾನು ಸಭೆ ನಡೆಸಬೇಕೋ ಬೇಡವೋ ?

(ಮತ್ತೆ ಉಮರಬ್ಬನವರು ಮಾತನಾಡುವುದಕ್ಕೆ ನಿಂತರು.)

MR. SPEAKER.—Nothing will go on record.

ಅಧ್ಯಕ್ಷರು.—ಉತ್ತರ ತರಿಸಿಕೊಡುತ್ತೇನೆ ಕೂಡ್ರಿ. ನೀಲಕಂಠಪ್ಪನವರೇ, ತಾವು ಓದ್ರಿ.

ಶ್ರೀ ಬಿ.ಆರ್. ನೀಲಕಂಠಪ್ಪ. — ಅಧ್ಯಕ್ಷರೇ.....

ಶ್ರೀ ಬಿ.ಎಸ್. ಯಡಿಯೂರಪ್ಪ.—ಪ್ರತಿ ವರ್ಷ ಈ ವಿಚಾರ ಬರುತ್ತಿದೆ. ಸರ್ಕಾರ ತೀರ್ಮಾನ ತೆಗೆದುಕೊಳ್ಳದಿದ್ದರೆ ಹೇಗೆ ? ಇದಕ್ಕೆ ಅಂತಿಮ ಹಾಡು ಹಾಡಬೇಕಲ್ಲ ?

ಶ್ರೀ ಆರ್. ವೆಂಕಟರಾಮಯ್ಯ.—ರಘುಪತಿಯವರು ಈಗಾಗಲೇ ಆಶ್ವಾಸನೆ ಕೊಟ್ಟಿದ್ದಾರೆ, ಆ ಮೇಲೆ ಅವರ ನಂತರ ಬಂದ ಮಂತ್ರಿಗಳೂ ಆಶ್ವಾಸನೆ ಕೊಟ್ಟಿದ್ದಾರೆ. ನಾಲ್ಕು ಜನ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ: ದಯವಿಟ್ಟು ನೀವೂ ಹಾಗೇ ಮಾಡಬೇಡಿ. ಅವರು ಕೊಟ್ಟ ಭರವಸೆಯನ್ನು ಫುಲ್‌ಫಿಲ್ ಮಾಡಿ.

ಅಧ್ಯಕ್ಷರು.— ನೀಲಕಂಠಪ್ಪನವರೇ ಓದ್ರಿ.

೧೭) ತರೀಕೆರೆ ತಾಲ್ಲೂಕಿನ ಜಮ್ಮೇವಳ್ಳ ಜಲಾಶಯಕ್ಕೆ ಓದೀರನ ಹಳ್ಳದಿಂದ ನೀರನ್ನು ಒದಗಿಸುವ ಯೋಜನೆಯನ್ನು ಕಾರ್ಯ ರೂಪಕ್ಕೆ ತರುವುದರು.

ಶ್ರೀ ಬಿ.ಆರ್. ನೀಲಕಂಠಪ್ಪ — ತರೀಕೆರೆ ತಾಲ್ಲೂಕಿನ ಜಮ್ಮೇದಳ್ಳ ಜಲಾಶಯಕ್ಕೆ ಓದೀರನಹಳ್ಳದಿಂದ ನೀರು ಒದಗಿಸುವ ಬಗ್ಗೆ ಯೋಜನೆ ರೂಪಿತವಾಗಿದ್ದು ಈಗಾಗಲೇ ಶಂಕುಸ್ಥಾಪನೆ ಕಾರ್ಯ ಒಂದು ವರ್ಷದ ಹಿಂದೆಯೇ ಆಗಿದ್ದು ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಂಬಂಧಪಟ್ಟ ಇಂಜಿನಿಯರ್ ವಿಭಾಗವು ಟೆಂಡರ್ ಕರೆದು ಕಾರ್ಯರೂಪಕ್ಕೆ ತರಲು ತಯಾರಿದ್ದು ಈಗ ಅರಣ್ಯ ಇಲಾಖೆಯವರಿಂದ ಸುಮಾರು ೫ ಹೆಕ್ಟೇರ್ ಜಮೀನನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಇದರ ಬಗ್ಗೆ ಹಲವಾರು ಸಾರಿ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದರೂ ಈ ಯೋಜನೆ ಕಾರ್ಯರೂಪಕ್ಕೆ